ಸರ್ಕಾರದವರು ನಾವು ಎಲ್ಲಾ ರೀತಿಯಲ್ಲಿ ಅಲ್ಲಿ ಕಮ್ಯುನಲ್ ಹಾರ್ಮನಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಶಾಂತಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ ಮತ್ತು ಯಾರು ಇಂಜೂರು ಆಗಿದ್ದಾರೆ. ಅವರಿಗೆ ಕಾಂಪನ್‌ಸೇಷನ್ ಕೊಡುತ್ತೇವೆಂದು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮುಖ್ಯಮಂತ್ರಿಗಳ ಪರವಾಗಿ ಭರವಸೆ ಕೊಟ್ಟಿದ್ದರು. ಆದರೆ ನನಗನ್ನಿಸುತ್ತದೆ, ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಏನು ಹೇಳಿದರು, ಅದು ಹಾಗೆಯೇ ಉಳಿಯಿತು. ಮುಖ್ಯಮಂತ್ರಿಗಳು ಆ ಕಡೆ ಹೋಗಲಿಲ್ಲ. ಏಕೆಂದರೆ ಇವತ್ತಿಗೂ ಗಲಾಟೆಗಳು, ಕೋಮು ಗಲಭೆಗಳು ಭಟ್ಕಳದಲ್ಲಿ ನಡೆಯುತ್ತಿವೆ. ನಿನ್ನೆ ರಾತ್ರಿ ನನಗೆ ಫೋನ್ ಬಂತು ; ಇಂದು ಮುಂಜಾನೆ ಕೂಡ ಬಂದಿದೆ. ನಿನ್ನೆ ಒಬ್ಬ ಪೈ ಎಂಬುವರ ಅಂಗಡಿಯನ್ನು ಲೂಟಿ ಮಾಡಿದ್ದಾರೆ, ಬೆಂಕಿ ಹಚ್ಚಿದ್ದಾರೆ. ಈ ವಿಚಾರದಲ್ಲಿ ನನಗೆ ಪೈ ಅವರು ದೂರವಾಣಿ ಮಾಡಿದ್ದಾರೆ. ಅದೇ ಪ್ರಕಾರ ಒಬ್ಬರು ಇಬ್ರಾಹಿಂ ಎಂದು, ಅವರು ಪಿಡಬ್ಲ್ಯುಡಿ ಕಂಟ್ರಾಕ್ಟರ್. ಭಟ್ಕಳದಿಂದ 12 ಕಿ.ಮೀ ದೂರದಲ್ಲಿ ವಾಸವಾಗಿದ್ದಾರೆ. ಇದರ ಬಗ್ಗೆ ಆರ್‌ಎನ್ ನಾಯಕ್ ಅವರೂ ಚೆನ್ನಾಗಿ ಬೆಳಕು ಚೆಲ್ಲಬಹುದು. ಅವರು ಹೇಳಬಹುದು. ಅಲ್ಲಿ ಇವರ ಆಸ್ತಿಪಾಸ್ತಿಗೆ ನಷ್ಟ ಮಾಡಿದ್ದಾರೆ, ಟ್ರಾಕ್ಟರ್ ಸುಟ್ಟಿದ್ದಾರೆ. ಇನ್ನೂ ಗಲಾಟೆ ನಡೆಯುತ್ತಿದೆ. ಸರ್ಕಾರ ಈ ಬಗ್ಗೆ ಹತೋಟಿಗೆ ತರುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಎಲ್ಲಾ ಹಂತದಲ್ಲೂ ಸರ್ಕಾರ ವಿಫಲವಾಗಿದೆ. ಇವತ್ತು ಪೋಲೀಸ್ ಇಲಾಖೆ ಏನು ಮಾಡುತ್ತಿದೆ ಎಂದು ಗೊತ್ತಾಗುವುದಿಲ್ಲ. ನನಗೆ ಯಾರೋ ಹೇಳಿದರು. ಡಿಐಜಿ ಅವರು ಅಲ್ಲೇ ಇದ್ದರೂ ಸಹ ಸರ್ಕಾರದ ಹಸ್ತಕ್ಷೇಪ ಇಲ್ಲಿ ಇದೆ ಎಂದು ಸಂಶಯ ಬರುತ್ತದೆ. ಇಲ್ಲಿಯವರೆಗೆ ನಾರ್ಮಲ್ಸಿ ಬರಬೇಕಾಗಿತ್ತು. ಅಯೋಧ್ಯಾ ಘಟನೆ ಆದಾಗ ಇಡೀ ರಾಜ್ಯದಲ್ಲಿ ಗಲಾಟೆ ಇದ್ದು ನಮ್ಮ ಈ ಜಿಲ್ಲೆಯಲ್ಲಿ ಕೋಮು ಗಲಭೆ ಆಗಿಲ್ಲ. ಆದರೆ ಇವತ್ತು ಪುನಃ ಭಟ್ಕಳದಲ್ಲಿ ಕೋಮು ಗಲಭೆ ಆಗಿದೆ. ಸರ್ಕಾರದಿಂದ ಹತೋಟಿ ಮಾಡುವುದಕ್ಕೆ ಆಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು 1.4.93ರಲ್ಲಿ ಶುರು ಆಯಿತು. ರಾಮನವಮಿ ಪ್ರೊಸೆಷನ್ ಮೇಲೆ ಕಲ್ಲು ಬಿತ್ತು. ಅಲ್ಲಿಂದ ಎರಡೂ ಕಡೆ ಜನರಿಗೆ ಇಂಜ್ಯುರೀಸ್ ಆಗಿದೆ, ಲೂಟಿ ಆಗಿದೆ. ಸಿಂಡಿಕೇಟ್ ಬ್ಯಾಂಕ್ ಬ್ರಾಂಚ್ ಮೇಲೆ ಬಾಂಬ್ ಹಾಕಿದ್ದಾರೆ. ಅದು ಕಂಟ್ರೀ ಬಾಂಬ್ ಎಂದರೂ ಸಹ ಅದೂ ಎಕ್ಸ್‌ಪ್ಲೋಸಿವ್ ಅಲ್ಲವೇ? ಇವತ್ತು ಅಲ್ಲಿ ಆಸ್ತಿಪಾಸ್ತಿ ನಷ್ಟ ಆಗಿದೆ. ಇವತ್ತು ಅಲ್ಲಿ ಇಂಜ್ಯುರೀಸ್ ಆಗಿರುವವರಿಗೆ ಕೇವಲ ಒಂದೂವರೆ ಸಾವಿರ ಪರಿಹಾರ ಕೊಟ್ಟಿದ್ದಾರೆ. ಸರ್ಕಾರಕ್ಕೆ ನಾಚಿಕೆ ಬರಬೇಕು. ಇವತ್ತು ಮಣಿಪಾಲ್ ಆಸ್ಪತ್ರೆಯಲ್ಲಿ ಗಾಯಗೊಂಡ ಜನರು ಇದ್ದಾರೆ. 3ನೇ ತಾರೀಖು ಈ ವಿಚಾರ ಪ್ರಸ್ತಾಪ ಮಾಡಿದಾಗ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇವತ್ತಿನವರೆಗೂ ಕಾಂಪನ್‌ಸೇಷನ್ ಸಿಕ್ಕಿಲ್ಲ. ಸೌಹಾರ್ದ ವಾತಾವರಣ ತರುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇವತ್ತು ಪೋಲೀಸರು ನಿಷ್ಕ್ರೀಯರಾಗಿದ್ದಾರೆ. ಪೋಲೀಸರು ಕ್ರಮ ತೆಗೆದುಕೊಳ್ಳುವುದಕ್ಕೆ ಇಚ್ಛೆ ಇದ್ದರೂ ಸಹ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಆ ಪರಿಸ್ಥಿತಿ ಭಟ್ಕಳದಲ್ಲಿ ನಿರ್ಮಾಣವಾಗಿದೆ. ನಿಮಗೆ ಏನಾದರೂ ಕಾನೂನು ಸುವ್ಯವಸ್ಥೆ ಇರಬೇಕೆಂಬ ಇಚ್ಛೆ ಇದ್ದರೆ ಬೇಗನೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಪೋಲೀಸರಿಗೆ ಫುಲ್ ಫ್ರೀಡಮ್ ಕೊಡಿ. ಇವತ್ತು ಇಲ್ಲಿ ಬಿಗಿ ಕ್ರಮ ತೆಗೆದುಕೊಳ್ಳದಿದ್ದರೆ ಅನಾಹುತ ಇನ್ನೂ ಹೆಚ್ಚು ಆಗಬಹುದು. ಇವತ್ತು ಎರಡೂ ಕಡೆಯವರಿಗೆ ಅನ್ಯಾಯವಾಗಿದೆ. ಒಂದು ಕಡೆ ಮಾತ್ರ ಆಗಿದೆ ಎಂದು ಹೇಳುವುದಿಲ್ಲ.

ನಮಗೆ ಬೇಕಾಗಿರತಕ್ಕದ್ದು ಶಾಂತಿ. ಕೋಮು ಸೌಹಾರ್ದ ಬೇಕಾಗಿದೆ. ಆ ದೃಷ್ಟಿಯಿಂದ ಸರ್ಕಾರ ಇವತ್ತು ಭಟ್ಕಳದಲ್ಲಿ ಸೌಹಾರ್ದ ವಾತಾವರಣ ತರುವುದಕ್ಕೆ ಸಂಪೂರ್ಣ ವಿಫಲವಾಗಿದೆ. ನನಗೆ ಸ್ಪಷ್ಟೀಕರಣ ಬೇಕು. ಇವತ್ತಿನವರೆಗೆ ಎಷ್ಟು ಇಂಜ್ಯುರೀಸ್ ಆಗಿದೆ, ಎಷ್ಟು ಸ್ಟ್ಯಾಬ್ ಆಗಿದೆ, ಎಷ್ಟು ಮನೆ ಸುಟ್ಟಿದ್ದಾರೆ, ಎಷ್ಟು ಕಲ್ಲು ಬಿದ್ದಿದೆ, ಎಷ್ಟು ಎಕ್ಸ್‌ಪ್ಲೋಸೀವ್ಸ್ ಹಿಡಿದಿರಿ, ಇದರ ಹಿಂದೆ ಯಾರು ಇದ್ದಾರೆ ಎಂಬುದು ಹೇಳಬೇಕು. ಏಕೆಂದರೆ ಪೇಪರ್‌ನಲ್ಲಿ ಒಂದು ಸುದ್ದಿ ಬಂದಿದೆ. ಮೆಮನ್ ಬ್ರದರ್ಸ್, ಬಾಂಬೆ ಬ್ಲಾಸ್ಟ್‌ನಲ್ಲಿ ಇನ್ವಾಲ್ವ್ ಆಗಿದ್ದು, ಅವರ ಲಿಂಕ್ ಹುಬ್ಬಳ್ಳಿವರೆಗೂ ಹರಡಿದೆಯಂತೆ. ಅವರಿಗೂ ಇದಕ್ಕೆ ಲಿಂಕ್ ಇದೆಯೇ? ಇದನ್ನೆಲ್ಲಾ ನೋಡಬೇಕಾಗುತ್ತದೆ. ಏನೂ ತೊಂದರೆ ಇಲ್ಲ, ಗಲಾಟೆ ಇಲ್ಲ ಎಂದು ಹೇಳುತ್ತಿದ್ದೀರಿ, ಎಲ್ಲಾ ಕಡೆ ಶಾಂತಿ ಇದೆ ಎಂದು ಹೇಳುತ್ತೀರಿ. ಆದರೆ ಅಶಾಂತತೆ ಇಲ್ಲಿ ಇದೆ. ಸ್ಪಷ್ಟವಾಗಿ ತಾವು ಹೇಳಬೇಕು. ಬೇಕಾದರೆ ಮುಖ್ಯಮಂತ್ರಿಗಳು 2 ಗಂಟೆ ಸಮಯ ತೆಗೆದುಕೊಂಡು ಸ್ಪಷ್ಟ ಉತ್ತರ ಕೊಡಬೇಕು. ಎಷ್ಟು ಜನ ಇಂಜ್ಯೂರ್ ಆಗಿದ್ದಾರೆ? ಕಾಂಪನ್‌ಸೇಷನ್ ಎಷ್ಟು ಆಗಿದೆ? ಇವತ್ತು ಹತೋಟಿಗೆ ತರಲು ಏನು ಕಾರ್ಯಕ್ರಮ ಸರ್ಕಾರದಿಂದ ಆಗಿದೆ? ನಾನು ಅಲ್ಲಿಗೆ ಹೋಗಬೇಕೆಂದು ಇದ್ದೆ. ಆದರೆ ಅಲ್ಲಿ ಟೆನ್‌ಷನ್ ಇದೆ, ತಾವು ಬರುವುದು ಬೇಡ ಎಂದು ಪೋಲೀಸ್ ಅಧಿಕಾರಿಗಳು ಹೇಳಿದರು. ಈಗ ನಮಗೆ ಅವರು ಪರ್ಮಿಷನ್ ಕೊಟ್ಟಿದ್ದಾರೆ. ನಾನು 10ನೇ ತಾರೀಖು ಭೇಟಿ ಕೊಡುತ್ತಿದ್ದೇನೆ. ಇದರಿಂದ ಇನ್ನೂ ಹೆಚ್ಚಿನ ಬೆಳಕು ಚೆಲ್ಲುವುದಕ್ಕೆ ಸಾಧ್ಯ ಆಗಬಹುದು. ಅಲ್ಲಿಯ ಶಾಸಕರು ಇಲ್ಲೇ ಇದ್ದಾರೆ. ಅವರೂ ಇದರ ಬಗ್ಗೆ ಬೆಳಕು ಚೆಲ್ಲಬೇಕು. ನಾವು ಯಾರ ವಿರುದ್ಧ ಇಲ್ಲ. ನಮಗೆ ಶಾಂತಿ ಬೇಕಾಗಿದೆ. ಮುಸಲ್ಮಾನರಾಗಲೀ, ಹಿಂದೂಗಳಾಗಲೀ, ಸಿಕ್ ಆಗಲೀ, ನಾವೆಲ್ಲಾ ಕೋಮು ಸೌಹಾರ್ದದಿಂದ ಹೋಗಬೇಕೆಂದು ಇಚ್ಛೆ. ಇದರಲ್ಲಿ ಪೊಲಿಟಿಕಲ್ ಕ್ಯಾಪಿಟಲ್ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಸರ್ಕಾರ ವಿಫಲವಾಗಿದೆ. ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆಂದು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಮಾನ್ಯ ದೇಶಪಾಂಡೆಯವರು ಏನು ಹೇಳಿದರು ಅದು ನಡೆದಿದೆ. ನಿನ್ನೆ ಘಟನೆ ನಡೆದ ನಂತರ ಡಿಐಜಿ ಲಾ ಅಂಡ್ ಆರ್ಡರ್ ಅವರು ಅಲ್ಲಿಗೆ ಹೋಗಿದ್ದಾರೆ. ಮತ್ತೆ ಅದರ ಜೊತೆಗೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ಮಂತ್ರಿಗಳಾದ ರಾಣೆಯವರು ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಹಿರಿಯ ಸಚಿವರಾದ ಮಾನ್ಯ ಯಾಹ್ಯಾದವರು ಭೇಟಿ ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಉತ್ತರ ಕನ್ನಡ ಜಿಲ್ಲೆಯ ಮಂತ್ರಿಗಳಾದ ಪ್ರಭಾಕರರಾಣೆಯವರು ಹೋದರಲ್ಲಾ, ಅವರಿಗೆ ಅಲ್ಲಿ ಫುಟ್‌ಪಿಟ್ ಮಾಡಿ ಕಳುಹಿಸಿದ್ದಾರೆ. ಅವರನ್ನು ನೀವು ಬೇಕಾದರೆ ಕೇಳಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪುಟ್‌ಪಿಟ್ ಮಾಡುವುದು ಅದು ರಾಜಕೀಯ.

ಶ್ರೀ ಆರ್. ವಿ. ದೇಶಪಾಂಡೆ : ಏಕೆ ನಿಮ್ಮ ಮೇಲೆ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ. ನಾನು ರಾಣೆಯವರ ಬಗ್ಗೆ ವೈಯಕ್ತಿಕವಾಗಿ ಮಾತನಾಡುವುದಿಲ್ಲ. ಆ ಮಂತ್ರಿಗೆ ಅಲ್ಲಿ ಸ್ವಾಗತ ಆಗಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅಲ್ಲಿ ಫುಟ್‌ಔಟ್ ಮಾಡಿದ್ದಾರೆಂದರೆ ಅಲ್ಲಿ ರಾಜಕೀಯ ಉಪಯೋಗಿಸಿಕೊಂಡಿದ್ದಾರೆಂದು ಆಯಿತು. ತಾವು ವಿರೋಧಪಕ್ಷದ ನಾಯಕರು ಹಾಗೆ ಹೇಳಬಾರದು. ಅವರ ಜೊತೆಗೆ ಯಾಹ್ಯಾರವರು ಕೂಡ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ನಿಮ್ಮ ಪೋಲೀಸರನ್ನು ಕೇಳಿ, ಯಾವಾಗ ಅವರು ಅಲ್ಲಿಗೆ ವಿಸಿಟ್ ಮಾಡಿದರು, ಆಗ ಜನ ಎಷ್ಟರಮಟ್ಟಿಗೆ ರೊಚ್ಚಿಗೆದ್ದರು, ರೊಚ್ಚಿಗೆದ್ದ ಜನ ಸಿಟ್ಟಿನಿಂದ ಏನು ಮಾಡಿದರು ಎಂದು ಕೇಳಿ? ಪೋಲೀಸ್ ರೆಕಾರ್ಡ್ ತರಿಸಿ ನೋಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ದೊಡ್ಡವರು, ಹಿರಿಯರು, ಆದರೂ ಸರ್ವಥಾ ತಾವು ಹೇಳುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಆ ಜಿಲ್ಲೆಗೆ ನನಗೆ ಪರ್ಸೊನಲ್ ಆಗಿ ಬೇಕಾಗಿರಲಿ ಬೇಡವಾಗಿರಲಿ ಏನಾಗಿದೆ ಏನು ನೋಡಬೇಕೆಂದು ಕಾಳಜಿಯಿಂದ ಹೋದರೆ ಫುಟ್‌ಔಟ್ ಮಾಡಿದರೆ ಅದು ರಾಜಕೀಯ ನೀವು ಮಾಡಿದಿರಿಯೆಂದು ಆಯಿತು. ಯಾರು ಫುಟ್‌ಔಟ್ ಮಾಡಿದ್ದಾರೆ? ಅದರ ಜೊತೆಗೆ ಶ್ರೀಮಾನ್ ಯಾಹ್ಯಾರವರು ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮಗೇನು ಕಾಳಜಿ ಇದೆ ಈ ಬಗ್ಗೆ, ಅಷ್ಟೇ ಕಾಳಜಿ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದಾರೆ. ಪೋಲೀಸರಿಗೆ ತಾವು ಹೇಳಿದ ರೀತಿಯಲ್ಲಿ ಫ್ರೀಡಮ್ ಕೊಟ್ಟಿದೆ. ಪೋಲೀಸರಿಗೆ ಅವರ ಕೆಲಸ ಕಾರ್ಯಗಳಲ್ಲಿ ಈ ರೀತಿ ಕೆಲಸ ಮಾಡಿ ಆ ರೀತಿ ಕೆಲಸ ಮಾಡಿಯೆಂದು ಯಾವ ಅಡ್ಡಿಆತಂಕಗಳನ್ನು ಒಡ್ಡುತ್ತಿಲ್ಲ. ನಮಗೆ ಬೇಕಾಗಿರುವುದು ತಾವು ಹೇಳಿದ ಹಾಗೆ ಆ ಊರಿನಲ್ಲಿ ಶಾಂತಿ ನೆಲೆಸಬೇಕೆನ್ನುವ ದೃಷ್ಟಿಯಿಂದ ಪೋಲೀಸರಿಗೆ ಪೂರ್ಣವಾದ ಫ್ರೀಡಂ ಕೊಟ್ಟಿದ್ದೇವೆ. ಪರಿಹಾರದ ಬಗ್ಗೆ ತಾಪೇನು ಹೇಳಿದ್ದೀರಿ, ಯಾರಿಗಾದರೂ ಪರಿಹಾರ ಸರಿಯಾದ ರೀತಿಯಲ್ಲಿ ಸಂದಾಯವಾಗದಿದ್ದರೆ ಅದನ್ನು ಪರಿಶೀಲನೆ ಮಾಡಿ ಪರಿಹಾರ ಕೊಡುವುದಕ್ಕೆ ಸೂಕ್ತ ಆದೇಶವನ್ನು ಈಗ ಕೊಟ್ಟಿದೆ. ಆದ್ದರಿಂದ ನಿಮ್ಮ ಮನಸ್ಸಿನ ಕಾಳಜಿ ಆತಂಕ ಏನಿದೆ ಅದು ಸರ್ಕಾರಕ್ಕೂ ಇದೆ. ಸರ್ಕಾರ ನಿಷ್ಪಲವಾಗಿದೆ ಎಂದು ತಾವು ಹೇಳುವುದು ಅದು ಅಷ್ಟು ಔದಾರ್ಯ ಪೂರ್ಣವಾದ ಮಾತಲ್ಲವೆಂದು ನಾನು ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಣೆಯವರು ಅಲ್ಲಿಗೆ ಹೋಗಿದ್ದು ನನಗೆ ಬಹಳ ಸಂತೋಷವಿದೆ. ನಾನು ಅಪ್ರಿಷಿಯೇಟ್ ಮಾಡುತ್ತೇನೆ. ರಾಣೆಯವರು ಹೋಗಿದ್ದರ ಬಗ್ಗೆಯಾಗಲೀ, ಮಾನ್ಯ ಯಾಹ್ಯಾರವರು ಹೋಗಿದ್ದರ ಬಗ್ಗೆಯಾಗಲೀ ನನಗೆ ಗೊತ್ತು. ಮಾನ್ಯ ದೇವರಾಯನಾಯಕ್, ಲೋಕಸಭಾ ಸದಸ್ಯರು, ಅವರೂ ಕೂಡ ಹೋಗಿ ಬಂದಿದ್ದಾರೆ. ನಾನು

ಅಪ್ರಿಷಿಯೇಟ್ ಮಾಡುತ್ತೇನೆ. ಅಷ್ಟೊಂದು ಜನ ರೊಚ್ಚಿಗೆದ್ದಿದ್ದಾರೆ, ಅವರು ಹೋಗಿದ್ದರ ಬಗ್ಗೆ, ಏಕೆ ಹೋದರು ಎಂದು ನಾನು ಕೇಳಲಿಲ್ಲ. ಹೋಗುವುದು ಅವರ ಕರ್ತವ್ಯ, ಅವರು ಹೋಗಿದ್ದಾರೆ, ನಾನು ಹೋಗುವುದು ನನ್ನ ಕರ್ತವ್ಯವಿದೆ ಅಲ್ಲಿ. ನಾನು ಹೋಗಲಿಕ್ಕೆ ಇವತ್ತು ಪರ್ಮಿಷನ್ ಕೊಟ್ಟಿದ್ದಾರೆ. ನಾನು ನಿಮಗೇನು ಹೇಳುತ್ತಿದ್ದೇನೆ. ಅಂದರೆ ಅವರುಗಳು ಹೋಗಿದ್ದರ ಬಗ್ಗೆಯಲ್ಲ, ಜನ ಅಷ್ಟೊಂದು ಸಿಟ್ಟಿನಲ್ಲಿದ್ದಾರೆಂದು ನಾನು ಹೇಳುತ್ತಿದ್ದೇನೆ. ಪರಿಹಾರದ ಬಗ್ಗೆ ಮೊನ್ನೆ ಸಹ ಹೇಳಿದ್ದೇನೆ. ತಾವು ವಿಚಾರ ಮಾಡಿ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ಇನ್ನು ಏನು ವಿಚಾರ ಮಾಡುತ್ತೀರಿ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪರಿಹಾರ ಕೊಟ್ಟ ವಿವರಗಳು ಬಂದಿಲ್ಲ. ಸ್ಥಳೀಯ ಅಧಿಕಾರಿಗೆ ಪರಿಹಾರ ಕೊಡುವ ಬಗ್ಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಎಲ್ಲಿಯಾದರೂ ವಿಶೇಷವಾಗಿ ಕೊಡಬೇಕೆಂದರೆ ತಾವು ತಿಳಿಸಿ, ತಕ್ಷಣ ಕೊಡೋಣ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಹೇಳಿದ್ದೇನೆ, ಮಣಿಪಾಲ ಆಸ್ಪತ್ರೆಯಲ್ಲಿ ಯಾರು ಸೀರಿಯಸ್ ಇದ್ದಾರೆ ಅವರಿಗೆ ಪರಿಹಾರ ಕೊಡಬೇಕಾಗಿದೆ. ಅವರು ತುಂಬಾ ತೊಂದರೆಯಲ್ಲಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಆಸ್ಪತ್ರೆಯಲ್ಲಿರುವವರನ್ನು ಹೋಗಿ ಅವರ ನಿಗಾ ನೋಡಿ ಯಾರಿಗೆ ಪರಿಹಾರ ಕೊಡುವ ಅವಶ್ಯಕತೆ ಇದೆ ಅವರಿಗೆ ತಕ್ಷಣ ಕೊಡಬೇಕೆಂದು ನಾವು ತಿಳಿಸುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ಇವರದು ಏನಾಗಿದೆ ಅಂದರೆ ಮತ್ತೆ ನಾನು ಹೇಳಿದರೆ ಬೇಜಾರುಪಟ್ಟುಕೊಳ್ಳುತ್ತಾರೆ. ಇದು When Rome was burning, Nero was fiddling. ಅಂತಹ ಪರಿಸ್ಥಿತಿ ಆಗಿದೆ ಸರ್ಕಾರದ್ದು. ಬೇಕಾದ್ದಲ್ಲಿ, ಬೆಂಕಿ ಹತ್ತಿಕೊಂಡು ಉರಿಯಲಿ, ಇವರಿಗೇನು ಚಿಂತೆಯಿಲ್ಲ. ಎಲ್ಲಾ ಶಾಂತಿಯಿದೆಯೆಂದು ಹೇಳಿಬಿಡುತ್ತಾರೆ. ಅಲ್ಲಿ ಬೆಂಕಿ ಹತ್ತಿಕೊಂಡಿರುತ್ತದೆ. ಹಾಗಾಗಿ ನಿಮಗೆ ಕಾಷನ್ ಮಾಡುತ್ತಿದ್ದೇನೆ. ಮತ್ತೊಂದು ಮಾತು ಹೇಳುತ್ತಿದ್ದೇನೆ. ನೀವು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಎಂಬುದನ್ನು ಹೇಳಿಲ್ಲ. ಇವತ್ತು ಪ್ರೆಷರ್ ಹೋಗುತ್ತಿದೆ. ಅರೆಸ್ಟ್ ಮಾಡಿದ ಜನಗಳನ್ನು ರಿಲೀಸ್ ಮಾಡಿಯೆಂದು ಹೇಳುತ್ತಿದ್ದಾರೆ. ಅದು ಏಕೆ? ಪೋಲೀಸರಿಗೆ ಫುಲ್ ಫ್ರೀಡಂ ಕೊಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅರೆಸ್ಟ್ ಮಾಡಿದವರನ್ನು ರಿಲೀಸ್ ಮಾಡಿಲ್ಲ. ಕೊಶ್ಚನ್ನಿಂಗ್‌ಗೆ ಕರೆದುಕೊಂಡು ಬರುತ್ತಾರೆ. ಅವರ ಬಗ್ಗೆ ತನಿಖೆ ನಡೆಸುತ್ತಾರೆ, ಸಂಬಂಧವಿಲ್ಲದವರನ್ನು ಬಿಡುತ್ತಾರೆ. ಆ ಸ್ವಾತಂತ್ರ್ಯವನ್ನು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಅತ್ಯಂತ ಪ್ರಮುಖವಾದ ವಿಚಾರವನ್ನು ತರಬೇಕೆಂದು ಪ್ರಯತ್ನಪಟ್ಟೆ. ಅದು ಸಾಧ್ಯವಾಗಲಿಲ್ಲ. ಆದರೂ ಸಹ ನನಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಭೈರೇಗೌಡರೇ, ಒಂದು ನಿಮಿಷ. ಮಾನ್ಯ ದೇಶಪಾಂಡೆಯವರು ಮಾತನಾಡಿದ್ದಾರೆ. ತಾವು ಇದುವರೆಗೆ ಯಾವುದೇ ವಿವರ ಕೊಡಲಿಲ್ಲ. ಎಷ್ಟು ಜನರನ್ನು ಬಂಧಿಸಿದ್ದೀರಿ? ಅಲ್ಲಿ ಏನು ಘಟನೆ ನಡೆದಿದೆ? ಅದಕ್ಕೆ ಯಾರು ಕಾರಣ? ಇನ್ನು ಮುಂದೆ ಇದು ಆಗದ ಹಾಗೆ ಅದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ, ಇದನ್ನೆಲ್ಲಾ ಹೇಳಬೇಕು. ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವುದಕ್ಕೆ ತಾವು ಹೆಚ್ಚು ಮಹತ್ವವನ್ನು ಕೊಟ್ಟು ಈ ರೀತಿಯ ಘಟನೆಗಳು ಈ ರಾಜ್ಯದಲ್ಲಿ ನಡೆಯದಿರಬೇಕಾದರೆ ಸೂಕ್ತ ಬಂದೋಬಸ್ತು ತಾವು ಮಾಡಬೇಕಾಗುತ್ತದೆ. ಆ ರೀತಿಯಲ್ಲಿ ನಿಮ್ಮ ಹೇಳಿಕೆಯಲ್ಲಿ ಒಂದು ಶಬ್ದ ಬರಲಿಲ್ಲ. ನಿಮ್ಮಲ್ಲಿ ಕೈಮುಗಿದು ಪ್ರಾರ್ಥನೆಗೆ ಮಾಡುತ್ತೇನೆ. ಪರಿಹಾರ ಆಮೇಲೆ ಸ್ವಾಮಿ, ಸತ್ತ ಮೇಲೆ, ಹೊಡೆತ ತಿಂದ ಮೇಲೆ ಪರಿಹಾರ ಕೊಡುವುದು. ಯಾವುದೇ ಸರ್ಕಾರ ಇದನ್ನು ಮಾಡುತ್ತದೆ. ಅದು ಆಗದ ಹಾಗೆ ನೋಡಿಕೊಳ್ಳುವುದಕ್ಕೆ ನೀವೇನು ಮಾಡುತ್ತೀರಿ? ಅದಕ್ಕೆ ತಾವು ಸೂಕ್ತ ಬಂದೋಬಸ್ತು ಮಾಡುತ್ತೀರಾ? ದಯಮಾಡಿ, ಅದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ಆ ಭಾಗದ ಶಾಸಕರು ಅದರ ಬಗ್ಗೆ ಏನು ಹೇಳುತ್ತಾರೆಂದು ನೋಡೋಣ.

*ಶ್ರೀ ಆರ್. ಎನ್. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ರಾಮನವಮಿಯ ದಿವಸ ಭಟ್ಕಳದಲ್ಲಿ ರಥ ಎಳೆಯುವಂತಹ ಸಂದರ್ಭದಲ್ಲಿ ಅಂದರೆ, ಸಾಯಂಕಾಲ 6.15 ಗಂಟೆ ಸಮಯದಲ್ಲಿ 3-4 ಕಲ್ಲು ಎಸೆದರು. ಕಲ್ಲು ಎಸೆದಾಗ ಪ್ರೊಸೆಷನ್‌ನಲ್ಲಿದ್ದವರು ತಿರುಗಿ ಕಲ್ಲು ಎತ್ತಿ ಹೊಡೆದಿದ್ದಾರೆ. ಹಾಗೆ ಹೊಡೆದಿದ್ದಾರಿಂದ ಗಲಭೆಯಾಯಿತು. ಪೋಲೀಸ್‌ನವರು ಕೆಲವು ಜನರನ್ನು ಕರೆದುಕೊಂಡು ಹೋಗಿ ಅಲ್ಲಿ ಒಂದು ತರಹ ಶಾಂತಿಸಭೆ ಮಾಡಿದಹಾಗೆ ಮಾಡಿ ಆ ಗದ್ದಲವನ್ನು ಸ್ಟಾಪ್ ಮಾಡಿಸಿ ಉಳಿದ ಪೊಲೀಸ್ ಫೋರ್ಸ್ ತರಿಸಿಕೊಂಡು ಅವರು ಅಲ್ಲಿ ಕೇರ್‌ಫುಲ್ ಆಗಿ ಇದ್ದಾಗ ಒಂದೇ ಸಮಯದಲ್ಲಿ ಸುಮಾರು ಮುರ್ನಾಲ್ಕು ಕಡೆ ನಾಲ್ಕು ಜನರಿಗೆ ಚೂರಿಯನ್ನು ಉಪಯೋಗಿಸಿ ಸ್ಟ್ಯಾಬ್ ಮಾಡಿದ್ದಾರೆ.

10.25 ಎ.ಎಂ.

ಮತ್ತು ಒಬ್ಬ ಜಿ. ಪಿ. ನಾಯಕ್, ಎನ್ನುವವರು ಅವರು ಅಲ್ಲಿ ಬಿ.ಜೆ.ಪಿ. ಅಧ್ಯಕ್ಷರು. ಅವರ ಮನೆಗೆ ಸುಮಾರು 50ರಿಂದ 60 ಜನ ಹೋಗಿ ಅವರು ಒಳಗಿದ್ದಾಗ ಅವರ ಮನೆ ಹೆಂಚಿನ ಮೇಲೆ, ಕೈಬಾಂಬು, ಬಹುಶಃ ಅದು ನಾಡಬಾಂಬು ಎಂದು ಹೇಳುತ್ತಾರೆ. ಈ ಬಾಂಬನ್ನು ಎಸೆದು ಅಲ್ಲಿ ಗಲಾಟೆ ಆಯಿತು. ಅವರ ಭತ್ತದ ಚೀಲ ವಗೈರೆ ಹೊರಗೆ ಎಸೆದು ಅದಕ್ಕೆಲ್ಲಾ ಬೆಂಕಿ ಹಾಕಿದ್ದಾರೆ. ಕೆಲವು ಕುರ್ಚಿ, ಬಾಗಿಲು ಕಿತ್ತು ಸುಟ್ಟು ಹಾಕಿದ್ದಾರೆ. ಈ ಗದ್ದಲದಲ್ಲಿ ಶ್ರೀ ಜಿ. ಪಿ. ನಾಯಕ್ ಎನ್ನುವವರು ತಪ್ಪಿಸಿಕೊಂಡು ಹಿಂದುಗಡೆ ಹೋಗಿಬಿಟ್ಟರು. ಅವರ ಹೆಂಡತಿ ಮತ್ತು ಮಗನನ್ನು ಹಿಡಿದುಕೊಂಡು, ನೀನು ನಿನ್ನ ಗಂಡನನ್ನು ತಂದುಕೊಡು,

ಇಲ್ಲದಿದ್ದರೆ ನಿನ್ನನ್ನು ಕೊಲ್ಲುತ್ತೇನೆ ಎಂದು ಹಾಗೆ ಹೀಗೆ ಗದ್ದಲ ಮಾಡಿದ್ದಾರೆ. ಅಷ್ಟರಲ್ಲಿ ಯಾವುದೋ ಕಾರಣಕ್ಕೆ ಅವರ ಹೆಂಡತಿ ಸಹ ತಪ್ಪಿಸಿಕೊಂಡು ಆಚೆ ಮನೆಗೆ ಹೋಗಿದ್ದಾರೆ. ಇಷ್ಟು ಗದ್ದಲ ಅಲ್ಲಿ ನಡೆಯಿತು. ಆಮೇಲೆ ಸುಮಾರು ನಾಲ್ಕು ಕಡೆಯಲ್ಲಿ, ಅದರಲ್ಲಿ ಒಬ್ಬರು ಫಿಷರ್‌ಮ್ಯಾನ್ ತನ್ನಷ್ಟಕ್ಕೆ ತಾನು ಸಾಯಂಕಾಲ ಸಮುದ್ರಕ್ಕೆ ಮೀನು ಹಿಡಿಯುವುದಕ್ಕೆ ಹೋಗುವವನು, ಅವನನ್ನು, ಹಿಡಿದು ಸ್ಟಾಬ್ ಮಾಡಿದ್ದಾರೆ. ರಿಕ್ಷಾ ಮೇಲೆ ಬರುವ ಒಬ್ಬ ನಾಯಕ್ ಎನ್ನುವವನಿಗೆ ಬುರ್ಖಾ ಹಾಕಿಕೊಂಡುಹೋಗಿ ಹೊಡೆದಿದ್ದು ಅದು ಯಾರೆಂದು ಪತ್ತೆಯಾಗಿಲ್ಲ. ಹೀಗೆ ಸ್ಟಾಬ್ ಮಾಡಿದ ಮೇಲೆ ಅವರು ರಿಕ್ಷಾವನ್ನು ಓಡಿಸಿಕೊಂಡು ಆಸ್ಪತ್ರೆಗೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಂಡು ತಾನಿನ್ನು ಬದುಕುವುದಿಲ್ಲ ಎಂದು ಆತನಿಗೇ ಗೊತ್ತಾದ ಮೇಲೆ ಅವನ ಸ್ನೇಹಿತರು ಅವನನ್ನು ತೆಗದುಕೊಂಡು ಹೋಗಿ ಮಣಿಪಾಲ ಆಸ್ಪತ್ರೆಗೆ ಸೇರಿಸಿದ್ದಾರೆ. ಹಾಗೆ ನಾಲ್ಕೈದು ಜನ ಅಲ್ಲಿ ಇದ್ದಾರೆ. ಜಿ. ಪಿ. ನಾಯಕ್ ಎನ್ನುವ ನನ್ನ ಭಾವನಿಗೆ ಮೂರೂ ನಾಲ್ಕು ಕಡೆ ಗಾಯವಾಗಿದೆ. ಅವರು ಈಗ ಭಟ್ಕಳ ಆಸ್ಪತ್ರೆಯಲ್ಲಿ ಇದ್ದಾರೆ. ಇದಿಷ್ಟು ಅಲ್ಲಿಯ ಕತೆ. ಇದರ ನಂತರದ ಗದ್ದಲದಲ್ಲಿ .....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥಾದ್ದು. ಯಾವ ಸ್ಕೂಟರ್‌ನಲ್ಲಿ ಶಸ್ತ್ರಾಸ್ತ್ರ, ಮದ್ದು ಗುಂಡು ಸಿಕ್ಕಿತು, ಆ ಸ್ಕೂಟರನ್ನು ಸೀಜ್ ಮಾಡಿದ್ದಾರೆ. ಆದರೆ ಆ ವ್ಯಕ್ತಿಯನ್ನು ಅರೆಸ್ಟ್ ಮಾಡಲಿಲ್ಲ.

ಶ್ರೀ ಆರ್. ಎನ್. ನಾಯಕ್ : ಈಗ ಏನಾಗಿದೆ ಎಂದರೆ, ಇದಕ್ಕೆ ಸ್ವಲ್ಪ ಟೈಮ್ ತೆಗೆದುಕೊಳ್ಳಬೇಕಾಗುತ್ತದೆ. ಕೆಂಪು ಮೋಟಾರ್ ಸೈಕಲ್‌ನಲ್ಲಿ ಬಂದು ರಿಕ್ಷಾದಲ್ಲಿ ಹೋಗುವವನನ್ನು ನಿಲ್ಲಿಸಿ ಒಬ್ಬನನ್ನು ಸ್ಟಾಬ್ ಮಾಡಿದ್ದಾರೆ. ಭಟ್ಕಳ ಊರು ಅದೇನೂ ಬೊಂಬಾಯಿ, ಬೆಂಗಳೂರಿನ ಹಾಗೆ ಸಿಟಿ ಅಲ್ಲ. ನಮ್ಮ ರಾಜಾಜಿನಗರದಷ್ಟು ದೊಡ್ಡದೂ ಅಲ್ಲ. ಸುಮಾರು 26-27 ಸಾವಿರ ಜನಸಂಖ್ಯೆ ಇರತಕ್ಕಂಥಾದ್ದು. ಐದಾರು ಬೀದಿಗಳಲ್ಲಿ ತಿರುಗಾಡಿದರೆ ಅದು ಏನು ಎಂದು ಗೊತ್ತಾಗುತ್ತದೆ. ಕೆಂಪು ಮೋಟಾರ್‌ಸೈಕಲ್ ಯಾರದ್ದು ಅಂತ ಅಲ್ಲಿ ಎಲ್ಲರಿಗೂ ಗೊತ್ತಿದೆ. ಸ್ವಲ್ಪ ಪತ್ತೆ ಹಚ್ಚಿದ್ದರೆ ಅವನು ಸಿಗುತ್ತಿದ್ದನೋ ಏನೋ; ಬಹುಶಃ ಅದನ್ನು ಮಾಡಲಿಲ್ಲ. ಅದಾದನಂತರ ಸ್ಕೂಟರ್ ಸಿಕ್ಕಿದೆ, ಮನುಷ್ಯನ ಪತ್ತೆಯಾಗಿಲ್ಲ. ನಂತರ ಹತ್ತು-ಹದಿನೈದು ಜನ ಏನು ಜಿ. ಪಿ. ನಾಯಕ ಅವರ ಮನೆಹತ್ತಿರ ಗಲಾಟೆ ಮಾಡಿದರು, ಅವರನ್ನು ಅವರು ಮತ್ತು ಅವರ ಹೆಂಡತಿ ಐಡೆಂಟಿಫೈ ಮಾಡಿದ್ದಾರೆ. ಅವರಲ್ಲಿ ಕೆಲವರನ್ನು ತಂದು ಇಟ್ಟಿದ್ದಾರೆ. ಅಲ್ಲಿ ಏನು ಆಗಿದೆ ವಿಷಯ? ನನಗೆ ಕೆಲಮಟ್ಟಿಗೆ ಪೋಲೀಸರ ಮೇಲೆ ನಂಬಿಕೆ ಇದೆ. ನನಗೆ ಈ ಸರ್ಕಾರದಮೇಲೆ ನಂಬಿಕೆ ಇದೆ. ಅವರು ಏನಾದರೂ ಮಾಡಿ ಪತ್ತೆಹಚ್ಚುತ್ತಾರೆ ಎಂದು ನಂಬಿಕೆ ಇದೆ. ಹಿಂದೆ ಎಲ್ಲಾ ಮೂರು-ನಾಲ್ಕು ಸಲ ಹೀಗೆ ಆದಾಗಲೂ ಸಹ ನನಗೆ ಸರ್ಕಾರದ ಮೇಲೆ ನಂಬಿಕೆ ಇತ್ತು. ಇದನ್ನು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ. ಸುಮಾರು 1987ರಲ್ಲಿ ಒಂದು ಸಲ ಹೀಗೆ ಆಯಿತು. ಮೊನ್ನೆ ಎಂ. ಪಿ. ಎಲೆಕ್ಷನ್ ಸಂದರ್ಭದಲ್ಲಿ ಒಂದು ಸಲ ಆಯಿತು. ಅದರ ಮಧ್ಯದಲ್ಲೂ ಆಯಿತು. ಅಲ್ಲಿ ಯಾರು ಗೂಂಡಾಗಿರಿ ಮಾಡುತ್ತಾರೆ ಅವರನ್ನು ಜನರು ಮರೆತು ಹೋಗುತ್ತಾರೆ. ಅವರು ಸಿಗುವುದಿಲ್ಲ. ಪೋಲೀಸ್ ಇಲಾಖೆಯವರು ಹಿಂದೆ ಹಿಡಿದಿದ್ದವರನ್ನು ಬಿಟ್ಟಿದ್ದರಿಂದ ಅವರು ಈಗ

ಚಿಗುರಿ ಕುಳಿತುಕೊಂಡಿದ್ದಾರೆ. ಕೆಲವು ಹಿಂದೂಗಳನ್ನು ಅರೆಸ್ಟ್ ಮಾಡಿದ್ದಾರೆ ಮತ್ತು ಕೆಲವು ಮುಸ್ಲೀಮರನ್ನು ಅರೆಸ್ಟ್ ಮಾಡಿದ್ದಾರೆ. ಹೀಗೆಲ್ಲಾ ಇದೆ. ನನ್ನ ಹತ್ತಿರ ಮುಸ್ಲೀಮರೂ, ಹಿಂದೂಗಳೂ ಕೆಲವರು ಬಂದಿದ್ದರು. ಅವರು ನನಗೆ ಹೇಳಿದರು, ನೀವು ಸ್ವಲ್ಪ ಹೇಳಿ. ನಾವು ಗದ್ದಲ ಮಾಡಿಲ್ಲ, ನಮ್ಮ ಮಕ್ಕಳು ಗದ್ದಲ ಮಾಡಿಲ್ಲ ಎಂದು. ಅದಕ್ಕೆ ನಾನು ಹೇಳಿದೆ, ನಾನು ಖಂಡಿತವಾಗಿ ಪೋಲೀಸಿನವರ ವ್ಯವಹಾರದಲ್ಲಿ ಕೈಹಾಕುವುದಿಲ್ಲ. ಇಂತಹ ಸಂದರ್ಭದಲ್ಲಿ ಪೋಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಮತ್ತು ಅವರನ್ನು ಬಿಡಿಸುವುದು ನಮ್ಮ ಕೆಲಸ ಅಲ್ಲ, ಸ್ವಲ್ಪ ತಡೆದುಕೊಳ್ಳಿ ಏನಾಗುತ್ತದೆ ಎಂದು ನೋಡೋಣ,ಇನ್ನೂ ನಾಲ್ಕು ದಿವಸ ಹೋಗಲಿ ಎಂದು ನಾನು ಹೇಳಿದೆ. ಆದರೆ ಈಗ ಮಾನ್ಯ ದೇಶಪಾಂಡೆಯವರು ಹೇಳಿದಹಾಗೆ, ಅವರು ಕೆಲವರನ್ನು ಕರೆದುಕರೆದು ಹೋಗಿ ನಂತರ ಬಿಡುತ್ತಾರಂತೆ. ಕೆಲವರನ್ನು ಹೀಗೇಕೆ ಬಿಡುತ್ತಿದ್ದಾರೆ, ಯಾವ ಒತ್ತಡಕ್ಕೆ ಸಿಕ್ಕಿದ್ದಾರೆ ಎಂದು ನನಗೆ ಗೊತ್ತಾಗುವುದಿಲ್ಲ. ಸರ್ಕಾರ ಹೀಗೆ ಬಿಡುತ್ತದೆ ಎನ್ನುವ ಭಾವನೆ ನನಗೆ ಇಲ್ಲ. ಈ ಭಾವನೆ ಇನ್ನು ಮುಂದೆ ಬಾರದ ಹಾಗೆ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ಆ ಕಳ್ಳರು ತಪ್ಪಿಸಿಕೊಂಡು ಹೋಗಿದ್ದರಿಂದ ಅಲ್ಲಿ ಹಲವಾರು ಸಲ ಹೀಗೆ ಗದ್ದಲ ಆಗುತ್ತಿದೆ. ಸರ್ಕಾರ ಒಂದು ಲೆಕ್ಕ ಕೊಡಲಿ. ಹಿಂದೆ ಎಷ್ಟು ದಿವಸ, ಎಷ್ಟು ಜನರಿಗೆ ಹೀಗೆ ಆಯಿತು, ಇದನ್ನು ಸ್ವಲ್ಪ ನೋಡಲಿ. ಅಲ್ಲಿ ಯಾವುದೋ ಒಂದು ಟೈಗರ್ ಗ್ರೂಪ್ ಎಂದು ಮಾಡಿಕೊಂಡು ಬಿಟ್ಟಿದ್ದಾರೆ. ಈ ಟೈಗರ್ ಗ್ರೂಪ್‌ನವರು ಇದನ್ನೆಲ್ಲಾ ಮಾಡುತ್ತಲೇ ಇರುತ್ತಾರೆ. ಅವರಿಗಷ್ಟೇ ಅಪಾಯ ಅಲ್ಲ, ನನಗೂ ಅಲ್ಲಿ ಅಪಾಯ ಇದೆ. ಇಷ್ಟು ವರ್ಷಕ್ಕೆ ರಾತ್ರಿ ಒಂದು ದಿವಸವಾದರೂ ನಾನು ಭಟ್ಕಳದ ಐ.ಬಿ.ಯಲ್ಲಿ ಮಲಗಿಲ್ಲ. ಎಲೆಕ್ಷನ್ ಬಂದಾಗ ಭಟ್ಕಳ ಟೌನ್‌ನಲ್ಲಿ ಓಡಾಡುವುದಕ್ಕೇ ಆಗುವುದಿಲ್ಲ. ಅಲ್ಲಿ ಜೀವಭಯ ಇದೆ. ನಾನು ಆ ಕೆಲಸ ಮಾಡಿಲ್ಲ. ಆದರೆ ನಾನು ಬದುಕಬೇಕಲ್ಲಾ? ಹೀಗೆ ಟೌನ್‌ನಲ್ಲಿ ಬಹಳ ಕಷ್ಟ ಇದೆ. ಶಸ್ತಾಸ್ತ್ರ ಮದ್ದುಗುಂಡು ಇದೆಯೋ ಇಲ್ಲವೋ, ಅದು ಬೇರೆ ಮಾತು.

ಅದು ಇದೆಯೆಂಬ ರೂಮರ್ ಇದ್ದಮೇಲೆ, ಪೋಲೀಸಿನವರಿಗೆ, ಸರ್ಕಾರಕ್ಕೆ ಸರಿಯಾದ ಧೈರ್ಯ, ಅಧಿಕಾರ ಬೇಕು. ಏನೆಂದರೆ, ಅವರ ಮನೆಯೊಳಗೆ ಹೋಗಿ, ಜಫ್ತಿ ಮಾಡಿ, ಇದನ್ನು ಪತ್ತೆ ಹಚ್ಚತಕ್ಕ ಪ್ರಯತ್ನ ಮಾಡಬೇಕು. ಒಂದು ವೇಳೆ ಕೋರ್ಟಿನ ಆರ್ಡರ್ ವಗೈರೆ ಇದ್ದರೆ, ಅದನ್ನು ತೆಗೆದುಕೊಂಡು ಹೋಗಿ ಮಾಡಲಿ. ಆದರೆ, ಅದನ್ನೇ ತಡೆಯುತ್ತಾರೆ. 3-4 ಕಡೆ ಪೋಲೀಸಿನವರಿಗೆ ಹೊಡೆದಿದ್ದಾರೆ, ಆ ದಿವಸ ನಾನು ಅಲ್ಲಿದ್ದೆ. ಪೋಲೀಸಿನವರ ಬಂದೋಬಸ್ತು ಇರಬೇಕಾದರೆ, ಪೈ ಎನ್ನುವವರ ಲಕ್ಷಾಂತರ ರೂಪಾಯಿಗಳ ಎರಡು ಜವಳಿ ಅಂಗಡಿಗಳಿಗೆ ಬೆಂಕಿ ಹಾಕಿದರು. ಇದು ನಡೆಯುತ್ತಾ ಇದೆ. ಇದು ಏಕೆ ಆಗುತ್ತದೆ ಎನ್ನುವುದನ್ನು ಸರ್ಕಾರ ಬಹಳ ಎಚ್ಚರಿಕೆಯಿಂದ ನೋಡಬೇಕು.

ಮಾನ್ಯ ರಾಣೆಯವರು ಹೋದರು ಎಂದು ನಮ್ಮ ಮಂತ್ರಿಗಳು ಹೇಳಿದರು. ಒಬ್ಬ ಮಂತ್ರಿಗಳು ಹೋದಾಗಲೂ ಸಹ ಗೌರವ ಕೊಡತಕ್ಕ ಸೌಜನ್ಯ ಆ ಟೌನ್‌ನಲ್ಲಿ ಇಲ್ಲ. ಸರ್ಕಾರ ಅಲ್ಲಿ ನೋಡುವುದಕ್ಕೆ ಬಂದಿದೆ ಎಂದರೆ, ಗೌರವ ಕೊಡಬೇಕಾಗುತ್ತದೆ. ಆದರೆ ಅವರಿಗೆಈ ಅಭ್ಯಾಸ ಇಲ್ಲ. ಆಮೇಲೆ, ಬಾಕಿಯವರು ಅಲ್ಲಿ ಓಡಾಡುವ ಹಾಗೆಯೇ ಇಲ್ಲ. ಪೋಲೀಸಿನವರಿಗೇ ಹೊಡೆಯುತ್ತಾರೆ. ಪೋಲೀಸಿನವರು ಕೆಲವು ಸಲ ಸುಮ್ಮನೆ

ಇರುತ್ತಾರೆ, ಕೆಲವು ಸಲ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆ. ಹೀಗಾದರೆ, ಇದನ್ನು ವಿಚಾರ ಮಾಡಬೇಕು. ಇದು ಮುಂದೆ ಏನಾಗುತ್ತದೆ ಎಂಬುದನ್ನು ನೋಡಿ. ಪೋಲೀಸಿನವರಿಗೆ ಶಕ್ತಿ ಕಡಿಮೆ, ಸರ್ಕಾರಕ್ಕೆ ಶಕ್ತಿ ಕಡಿಮೆ ಎಂದರೆ, ಪೋಲೀಸ್ ಫೋರ್ಸ್ ಹಿಂದೆ ತೆಗೆದುಕೊಂಡುಬಿಡಿ. ಅಲ್ಲಿ ಸರಿಯಾದ ಶಾಂತಿ ನೆಲೆಸುತ್ತದೆ. ನೀವು ಬೇಕಾದರೆ ಅದನ್ನು ನೋಡಿ. ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆ ಎನ್ನುವುದನ್ನು ನೀವೇ ತಿಳಿದು ನೋಡಿ. ಪೋಲೀಸ್ ಫೋರ್ಸ್ ಹಿಂದೆ ತೆಗೆದುಕೊಂಡು ನೋಡಿ, ತನಗೆ ತಾನೇ ನಿಂತುಹೋಗುತ್ತದೆ. ನನಗೆ ಪೋಲೀಸಿನವರ ಮೇಲೆ ನಂಬಿಕೆ ಇದೆ. ಅಲ್ಲಿ ಎಸ್. ಪಿ. ಯವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ನನಗೆ ಅವರ ಮೇಲೆ ನಂಬಿಕೆ ಇದೆ. ಡಿ.ಐ.ಜಿ. ಮೇಲೆ ನಂಬಿಕೆ ಇದೆ. ಆದರೆ, ಅವರಿಗೆ ಶಕ್ತಿ ಕೊಡಬೇಕಾದುದು ಸರ್ಕಾರ. ಇನ್ನೊಂದು ವಿಚಾರ ಹೇಳುತ್ತೇನೆ, ಅಲ್ಲಿ ಪಕ್ಷ, ಮತ್ತೊಂದು ಇಲ್ಲ. ಯಾರೋ ಒಬ್ಬ ಹೋಮ್ ಮಿನಿಸ್ಟರಿಗೆ ಬಹಳ ಬೇಕಾದವನು ಎಂದು ಹೇಳಿಕೊಂಡು ಪೋಲೀಸ್ ಸ್ಟೇಷನ್‌ನಲ್ಲಿ ಓಡಾಡುತ್ತಿರುತ್ತಾನೆ. ಎದುರು ಪಾರ್ಟಿ ನೋಡಿದವರು, ನೋಡಿ ಅಲ್ಲಿ ಅಬ್ದುಲ್ ರೆಹಮಾನ್ ಬಂದಿದ್ದಾನೆ, ಅವ ಏನಾದರೂ ಮತ್ತೆ ಪೋಲೀಸ್ ಶಿಫಾರಸ್ ಮಾಡಿ ತಪ್ಪಿಸಿಬಿಡುತ್ತಾನೆ ಎಂದು ಹೇಳುತ್ತಾರೆ. ಅವ ಹೋಮ್ ಮಿನಿಸ್ಟರ್ ಸ್ನೇಹಿತನೂ ಅಲ್ಲ ಅಥವಾ ಮುಖ್ಯವಾದ ವ್ಯಕ್ತಿಯೂ ಅಲ್ಲ.

ಆದರೂ ಈ ರೀತಿ ಅವನು ಹೇಳುತ್ತಾನೆ. ಇದನ್ನು ಪೋಲೀಸಿನವರು ನಂಬಲಿ ಅಥವಾ ನಂಬದಿರಲಿ ಈ ತರಹ ವಾತಾವರಣ ಇರುವುದರಿಂದ, ಅಲ್ಲಿ ಏನಾಗುತ್ತದೆಂದರೆ, ಪೋಲೀಸಿನವರಿಗೆ ಭಯ ಬರುತ್ತದೆ. ಆಮೇಲೆ, ಅವರು ಏನೋ ತೊಂದರೆ ಎಂದು ತಿಳಿದುಕೊಂಡು ಬಿಡುತ್ತಾರೆ. ಹೀಗಾಗಬಾರದು. ಅವ ಸ್ಟೇಟ್ ಹೋಮ್ ಮಿನಿಸ್ಟರ್ ರಮಾನಾಥ ರೈ ಅವರ ಸ್ನೇಹಿತ ಎಂದು ತಿರುಗಾಡುತ್ತಾನೆ. ಈಗಲೂ ನೀವು ವೆರಿಫೈ ಮಾಡಿ, ಅವ ಅಲ್ಲಿಯೇ ಇದ್ದಾನೆ. ನೀವೇ ಅಲ್ಲಿ ಹೋಗಿ ನೋಡಿ : ತಿರುಗಾಡುತ್ತಿರುತ್ತಾರೆ. ಮಂತ್ರಿಗಳಿಗೇ ಇದು ಗೊತ್ತಿಲ್ಲ. ಪೋಲೀಸಿನವರು ಕೆಲವು ಸಲ ನಂಬಬೇಕಾಗುತ್ತದೆ. ಹೀಗೆಲ್ಲಾ ಆದರೆ, ಬಹಳ ಕಷ್ಟ. ಹೀಗೆಯೇ ಆದರೆ, ಬಹಳ ಕಷ್ಟ. ಹೀಗೆಯೇ ಆದರೆ, ಹೊರಗಡೆಯಿಂದ ಶಸ್ತ್ರಾಸ್ತ್ರ ಏನಾದರೂ ಬಂದು, ಬಾಂಬೆ ತರಹ ದೊಡ್ಡ ಅನಾಹುತವಾಗುವುದು ಬೇಡ. ನನ್ನ ತಿಳುವಳಿಕೆ ಪ್ರಕಾರ ಆ ತರಹ ಬಾಂಬ್ ಹೊರಗಿನಿಂದ ಬಂದಿಲ್ಲ. ಅವರು ಉಪಯೋಗಿಸುವ ಬಾಂಬ್, ಕಲ್ಲು ಹೊಡೆಯುವುದಕ್ಕೆ ಉಪಯೋಗಿಸುವಂತಾದ್ದು, ಕೆಮಿಕಲ್ಸ್ ಹಾಕಿ ಅದನ್ನು ಮಾಡಿದ್ದಾರೆ. ಡೈನಾಮೈಟ್ಸ್ ಇರಬಹುದು. ಆದರೆ, ಬಾಂಬೆ ತರಹ ಬಂದಿಲ್ಲ, ಬರುವ ಸಾಧ್ಯತೆ ಇದ್ದರೂ ಇರಬಹುದು. ಆದ್ದರಿಂದ ಸರ್ಕಾರ ಎಚ್ಚರಿಕೆ ವಹಿಸಬೇಕು. ಯಾವ ಮುಲಾಜೂ ಇಲ್ಲದೆ, ಪೋಲೀಸಿನವರಿಗೆ ಸರಿಯಾದ ಅಧಿಕಾರ ಕೊಟ್ಟು, ಅವರನ್ನು ಹದ್ದುಬಸ್ತಿನಲ್ಲಿರತಕ್ಕ ವ್ಯವಸ್ಥೆ ಮಾಡಬೇಕು. ಆ ಮೋಟಾರು ಸೈಕಲ್‌ನವರು ಯಾರು, ಸ್ಕೂಟರ್‌ನವರು ಯಾರು ಎಂದು ಪೋಲೀಸಿನವರಿಗೆ ಗೊತ್ತಾಗುವುದಿಲ್ಲವೇ? ಒಂದು ಮನೆಯಿಂದ ಕಲ್ಲು ಬಿತ್ತು ಎಂದರೆ, ಆ ಮನೆಯವರನ್ನು ಕೇಳಿದರೆ ಗೊತ್ತಾಗುತ್ತದೆ. ಅವರು ಇದನ್ನು ಏಕೆ ಮಾಡುವುದಿಲ್ಲ? ಮೂಲತಃ ಕಲ್ಲು ಬಿದ್ದುದರಿಂದಲೇ ಗದ್ದಲವಾಗಿದೆ. ಆ ಎರಡು ಜನರನ್ನು ಹಿಡಿಯುವುದಕ್ಕಾಗುವುದಿಲ್ಲವೇ? ಇದನ್ನು ಕಂಡುಹಿಡಿಯಬೇಕಾಗುತ್ತದೆ. ಈ ಬಗ್ಗೆ ಯಾವರೀತಿ ಮಾಡಬೇಕೆಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಇಲ್ಲದಿದ್ದರೆ, ಬಹಳ ಕಷ್ಟವಾಗುತ್ತದೆ. ಆ

ಟೌನ್‌ನಲ್ಲಿ ಓಡಾಡಿ ಕೆಲಸ ಮಾಡುವುದಕ್ಕೆ ನನಗೇ ಧೈರ್ಯವಿಲ್ಲ. ಇದನ್ನು ನಿಮಗೆ ಕ್ಲಿಯರ್ ಆಗಿ ಹೇಳುತ್ತೇನೆ. ಇದು ಸರ್ಕಾರಕ್ಕೆ ಬಿಟ್ಟ ವಿಚಾರ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್ಕಾರ ಸ್ಕೂಟರ್‌ನಲ್ಲಿ ಮದ್ದುಗುಂಡು ಇಟ್ಟಿದ್ದವರನ್ನು ಅರೆಸ್ಟ್ ಮಾಡಿದೆಯೇ? ಮಾನ್ಯ ಕಾನೂನು ಸಚಿವರಾದ ರಾಮಸ್ವಾಮಿಯವರು ಸಭೆಯಿಂದ ಹೊರಟು ಹೋದರೆ ಹೇಗೆ?

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಈ ಅರ್ಧದಲ್ಲಿ ಮಂತ್ರಿಗಳು ಹೋಗುವುದು ಅಂದರೆ, ಅದು ಯಾರಿಗೂ ಗೌರವ ತರುವುದಿಲ್ಲ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ನಿಮ್ಮದೂ ಗೌರವ ಇದೆ ; ಈ ಸದನದ ಗೌರವವೂ ಇದೆ....

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ನನ್ನದೊಂದು ಕ್ರಿಯಾಲೋಪ. ನಮಗೆ ತಮ್ಮ ರಕ್ಷಣೆ ಬೇಕಾಗಿದೆ. ಈ ಸದನ ನಿಯಮಾವಳಿಗಳ ಪ್ರಕಾರ ನಡೆಯಬೇಕು. ಯಾವುದಾದರೊಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಸಂಬಂಧಪಟ್ಟ ಮಂತ್ರಿಗಳ ಪರವಾಗಿ, ಬೇರೆ ಮಂತ್ರಿಗಳ ಉತ್ತರ ಹೇಳುವುದಾದರೆ, ಆ ಮಂತ್ರಿಗಳು ವಿಷಯ ಪೂರ್ಣ ಆಗುವವರೆಗೂ ಇದ್ದು, ಉತ್ತರ ಕೊಡತಕ್ಕ ಸೌಜನ್ಯವನ್ನಿಟ್ಟುಕೊಳ್ಳಬೇಕು. ನಿಯಮದಂತೆ ಒಂದು ಪ್ರಶ್ನೆಯನ್ನು ಕೇಳುತ್ತೇವೆ. ಸಂಬಂಧಪಟ್ಟ ಒಬ್ಬರು ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಇನ್ನೊಬ್ಬರು ಅದೇ ಪ್ರಶ್ನೆಯನ್ನು ಕೇಳಿದಾಗ, ಇನ್ನೊಬ್ಬರು ಉತ್ತರ ಕೊಡಬೇಕೇ? ಇಂತಹ ನಡವಳಿಕೆಗಳಿಂದ ಈ ಸಭೆಗೆ ಅರ್ಥವಿದೆಯೇ?

ಶ್ರೀ ಸಿ. ಭೈರೇಗೌಡ : ನಿಯಮಾವಳಿ ಪ್ರಕಾರ, ಒಂದು ವಿಷಯದ ಮೇಲೆ ಇಬ್ಬರು ಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ. ಮೊದಲು ಯಾರು ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡುತ್ತಾರೆಯೋ, ಅವರೇ ಉತ್ತರವನ್ನು ಕೊಡಬೇಕು. ಬೇರೆಯವರು ಉತ್ತರ ಕೊಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶವಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ರಾಮಸ್ವಾಮಿಯವರನ್ನು ಸದನಕ್ಕೆ ಕರೆಸಿ, ಈಗ ಇನ್ನೊಬ್ಬರು ಮಂತ್ರಿಗಳು ಏಕೆ ಉತ್ತರ ಹೇಳಬೇಕು?

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಎನ್ನುವುದನ್ನು ಸ್ವಲ್ಪ ಕೇಳಿ. ರಾಮಸ್ವಾಮಿಯವರು ಏಕೆ ಹೋದರು ಎನ್ನುವುದನ್ನು ಕೇಳಿ ; ಅವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಬ್ಲೇಸಿಯಸ್. ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಇನ್ನೂ ಕೆಲವು ಸದಸ್ಯರು ಮಾತನಾಡುವವರು ಇದ್ದಾರೆ. ದಯಮಾಡಿ ಅವರು ಮಾತನಾಡಲಿ, ಅವರು ಮಾತನಾಡಿದ ಕೂಡಲೇ ಹಾರ್ನಳ್ಳಿ ರಾಮಸ್ವಾಮಿಯವರು ಬರುತ್ತಾರೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾತನಾಡುವವರು ಯಾರೂ ಇಲ್ಲ. ಮಂತ್ರಿಗಳು ಬರುವವರೆಗೂ ಮಾತನಾಡುತ್ತಾ ಇರಬೇಕಂತೆ. ನೋಡಿ ಇದು ಹೇಗಿದೆ?

(ಗೊಂದಲ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಇವರು ಈಗ ಉತ್ತರ ಕೊಡುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ : ಅವರು ಟೈಮ್ ಬೇಕಾದರೆ ತೆಗೆದುಕೊಳ್ಳಲಿ. ಇವರು ಅರ್ಧ ಉತ್ತರ ಕೊಟ್ಟು ಹೋದರೆ ಹೇಗೆ? ಅವರೇ ಒಂದು ಉತ್ತರ ಕೊಡಬೇಕು.

ಶ್ರೀ ಹೆಚ್. ಏಕಾಂತಯ್ಯ : ಸ್ವಾಮಿ, ತಾವು ಛೀಮಾರಿ ಹಾಕಿದರೂ ಅವರಿಗೆ ಏನೂ ಮಾನ ಮರ್ಯಾದೆ ಇಲ್ಲ. ತಾವು ಛೀಮಾರಿ ಹಾಕಿದರೂ ಏನೂ ಉಪಯೋಗ ಇಲ್ಲ. ಏಕೆಂದರೆ ಮಾನ ಮರ್ಯಾದೆ ಇರುವವರಿಗೆ ಬೈದರೆ ಅವಮಾನವಾಗುತ್ತದೆ. ಅದು ಇಲ್ಲದವರಿಗೆ ಏನೂ ಆಗುವುದಿಲ್ಲ. ಆ ಪರಿಸ್ಥಿತಿಗೆ ಸರ್ಕಾರ ಬಂದುಬಿಟ್ಟಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಯಮಾವಳಿಗಳ ಪ್ರಕಾರ ಒಂದು ಪ್ರಶ್ನೆಯನ್ನು ನಾವು ಎತ್ತಿದಾಗ ಒಬ್ಬ ಮಂತ್ರಿ ಅರ್ಧ ಉತ್ತರ ಕೊಟ್ಟಮೇಲೆ ಇನ್ನೊಬ್ಬ ಮಂತ್ರಿ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ತಾವು ರೂಲ್ಸ್ ತೆಗೆದು ನೋಡಿ. ಬೇಕಾದರೆ ರಾಮಸ್ವಾಮಿಯವರು ಆಮೇಲೆ ಬಂದು ಸ್ಟೇಟ್‌ಮೆಂಟ್ ಮಾಡಲಿ. ಇದು ನಮಗೆ ಒಂದು ರೀತಿ ಅವಮಾನ ಮಾಡಿದಂತಾಗುತ್ತದೆ.

ಅಧ್ಯಕ್ಷರು : ನಾನು ಹೇಳುತ್ತೇನೆ ಕುಳಿತುಕೊಳ್ಳಿ. ಅವರು ಹೇಳಿದರು ಮುಖ್ಯಮಂತ್ರಿ ಬಂದು ಉತ್ತರ ಹೇಳುತ್ತಾರೆ, ನೀವು ಸಮಯ ತೆಗೆದುಕೊಳ್ಳಿ ಎಂದು;

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರು ಬಂದು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಮಂತ್ರಿಗಳನ್ನು ಕರೆಸುತ್ತೇನೆ. ಬೇರೆಯವರು ಮಾತನಾಡಲಿಕ್ಕೆ ಇದೆ. ಅವರು ಮಾತನಾಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಹತ್ತರವಾದ ಸಂಗತಿ ಏನೆಂದರೆ ಸ್ಕೂಟರ್‌ನಲ್ಲಿ ಮದ್ದುಗುಂಡು ಸಿಕ್ಕಿದೆ. ಬೇರೆ ಕಡೆ ಬಾಂಬ್ ಬ್ಲಾಸ್ಟ್ ಆಗುತ್ತಿದೆ. ಅದು ಇಲ್ಲಿ ರಿಪೀಟ್ ಆಗಬಾರದು.

ಅಧ್ಯಕ್ಷರು : ನಾನು ಅವಕಾಶ ಕೊಡುವುದಿಲ್ಲ. ಇದರ ಬಗ್ಗೆ ಬಹಳಷ್ಟು ಚರ್ಚೆ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲಿ ನಡೆದಂತಾದ್ದು ಬೇರೆ ಕಡೆ ಹರಡಬಾರದು. ಅವರನ್ನು ಬಂಧಿಸಬೇಕು. ಅದು ಮಹತ್ವವಾದಂತಾದ್ದು.

ಅಧ್ಯಕ್ಷರು : ಅದಕ್ಕೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್ಕಾರಕ್ಕೆ ಏನಾಗಿದೆ? ಸರ್ಕಾರ ಬದುಕಿದೆಯೋ ಸತ್ತಿದೆಯೋ? ಏಕೆ ಹೀಗೆ ಮಾಡುತ್ತೀರಿ? ಅತ್ಯಂತ ಪ್ರಮುಖವಾದ ವಿಷಯವನ್ನು ಶಾಸಕರು ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. ರಾಜ್ಯದಲ್ಲಿ ಗಂಭೀರವಾದಂತಹ ಒಂದು ಪರಿಸ್ಥಿತಿ ಇದೆ. ಇದು ಇವರಿಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಅಥವಾ ರಾಮಸ್ವಾಮಿಯವರು ಬಂದು ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳ ಕೈಯಿಂದ ಹೇಳಿಕೆ ಕೊಡಿಸಿ ಸ್ವಾಮಿ;

ಅಧ್ಯಕ್ಷರು : ಅವರು ಮೇಲ್ಮನೆಯಲ್ಲಿ ಕೆಲಸ ಇದೆ ಎಂದು ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನನಗೆ ತಾವು ಅವಕಾಶ ಕೊಟ್ಟಿದ್ದೀರಿ ಈ ವಿಷಯ ಪುನಃ ಪ್ರಸ್ತಾಪ ಮಾಡಿದ್ದರಿಂದ ಆಮೇಲೆ ಕೊಡುತ್ತೇನೆಂದು ನನಗೆ ಅವಕಾಶ ಹೇಳಿದಿರಿ.

ಅಧ್ಯಕ್ಷರು : ಯಾವ ವಿಷಯ ತಮ್ಮದು?

ಆ) ವಿಷಯ : ರೈತರ ಬೆಳೆಗಳಿಗೆ ಬೆಲೆ ನಿಗದಿ ಮಾಡುವ ಬಗ್ಗೆ.

ಶ್ರೀ ಸಿ. ಬೈರೇಗೌಡ : ಇವತ್ತು ರೈತರು ಉತ್ಪಾದನೆ ಮಾಡುತ್ತಾ ಇರತಕ್ಕಂಥಾ ಪ್ರತಿಯೊಂದರ ಬೆಲೆ ಕೂಡ ಬಿದ್ದು ಹೋಗಿದೆ. ನನ್ನ ಹತ್ತಿರ ಅಂಕಿ ಅಂಶಗಳಿವೆ. ಯಾವ ಯಾವುದು ಏನು ಆಗಿದೆ ಎನ್ನತಕ್ಕಂಥಾದ್ದು. ಇವತ್ತು ಕೊನೆಯ ದಿವಸ. ಇಷ್ಟು ರೈತರು ಕಂಗಾಲಾಗಿದ್ದರೂ ಅವರು ಬೆಳೆದಿರತಕ್ಕಂಥ ಬೆಳೆ ಬಿದ್ದು ಹೋಗಿದ್ದರೂ ರೈತರು ನೆಲ ಕಚ್ಚುತ್ತಿದ್ದರೂ ಸಹ ಆ ವಿಚಾರದಲ್ಲಿ ಈ ಸದನ ಗಮನ ಹರಿಸಲಿಲ್ಲ ಅಂದ್ರೆ ನಾನಂತೂ ರೈತನಾಗಿ ಇಲ್ಲಿ ಬಂದು ನನ್ನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಆದ್ದರಿಂದ ಏನೇನು ಆಗಿದೆ ಎನ್ನತಕ್ಕಂಥ ವಿವರಗಳು ನನ್ನಲ್ಲಿವೆ. ಅದನ್ನು ಸರ್ಕಾರದ ಗಮನಕ್ಕೆ ಹಾಗೂ ಸದನದ ಗಮನಕ್ಕೆ ತರತಕ್ಕಂಥಾದ್ದು ನನ್ನ ಕರ್ತವ್ಯ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ಮೊನ್ನೆ ನಾವು ಪ್ರಸ್ತಾಪ ಮಾಡಿದಂತೆ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥಾದ್ದು. ಕೇವಲ ಬಡ್ಡಿ ಮತ್ತು ಸುಸ್ತಿಬಡ್ಡಿಗೆ ಸಂಬಂಧಪಟ್ಟಂಥ ವಿಚಾರದ ಬಗ್ಗೆ. ಆದರೆ ಇದು ಬೇರೆ ವಿಚಾರ.

ಅಧ್ಯಕ್ಷರು : ಅದೇ ಸಮಯದಲ್ಲಿ ಪ್ರಸ್ತಾಪ ಮಾಡಿ.

ಶ್ರೀ ಸಿ. ಬೈರೇಗೌಡರು : ನನಗೆ 5-10 ನಿಮಿಷ ಅವಕಾಶ ಕೊಟ್ಟರೆ ನಾನು ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ಬೇರೆ ಬೇರೆ ವಿಷಯಗಳು ಇವೆ. ಅವುಗಳನ್ನು ತೆಗೆದುಕೊಂಡು ನಂತರ ನಾನು ಮತ್ತೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಆಯಿತು.

ವಿಷಯ : ವರಾಹಿ ಯೋಜನೆಯಲ್ಲಿ ಆಗಿರತಕ್ಕ ಅವ್ಯವಹಾರಗಳ ಬಗ್ಗೆ.

*ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚುಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಒಂದು ವಿಚಾರ ಹೇಳಬೇಕಾಗಿದೆ. ಇವತ್ತು ನಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್ ಇಲ್ಲ. ಆದ್ದರಿಂದ ಮಾನ್ಯ ಡಿಸೌಜ ಸಾಹೇಬರು ಬರೆದುಕೊಂಡು ಅವರ ಕಡೆ ಕೊಡಲಿ. ನಾನು ಅವರ ಕಡೆಯಿಂದ ಉತ್ತರ ಅಪೇಕ್ಷೆ ಮಾಡುತ್ತೇನೆ. ಏಕೆಂದರೆ ತಾವು ಉತ್ತರ ಕೊಡುವುದು ಸರಿಯಲ್ಲ. ಇದೊಂದು ಪಬ್ಲಿಕ್ ಅಂದರೆ ಟೇಕಿಂಗ್ ಕಮಿಟಿಯವರು ವರಾಹಿ ಪ್ರಾಜೆಕ್ಟ್ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ವರಾಹಿ ಪ್ರಾಜೆಕ್ಟ್‌ನಲ್ಲಿ ಸಾಕಷ್ಟು ಮಾಲ್‌ಪ್ರಾಕ್ಟೀಸ್ ಆಗಿದ್ದಾವೆ. ಅವ್ಯವಹಾರ ಆಗಿದ್ದಾವೆ ಮತ್ತು ಬಹಳಷ್ಟು ಕರೆಪ್ಷನ್